**<u>ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಕೊಪ್ಪ.</u>**

**<u>ಸಿ.ಸಿ. ನಂ.*126/2023*</u>**

***<u>ಪಿರ್ಯಾಧಿದಾರರುಃ</u>*** ತಾಲ್ಲೂಕು ಕೃಷಿ ಉತ್ಪನ್ನ ಮಾರುಕಟ್ಟೆ ಸಹಕಾರ ಸಂಘ ನಿಯಮಿತ, ಕೊಪ್ಪ, ಕೊಪ್ಪ ಅಂಚೆ ಮತ್ತು ತಾಲ್ಲೂಕು,
ಪ್ರತಿನಿಧಿಸಿದವರುಃ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಶ್ರೀ ವಿವೇಕಾನಂದ.

**ವಿರುದ್ಧ**

***<u>ಆರೋಪಿಃ</u>*** ಶ್ರೀ ಡಿ.ಆರ್. ಉದಯ ಬಿನ್ ರಾಮಪ್ಪ, ವಾಸ ದಯಂಬಳ್ಳಿ, ದಯಂಬಳ್ಳಿ ಅಂಚೆ, ಕೊಪ್ಪ ತಾಲ್ಲೂಕು.

- - -

**<u>ಆಪಾದನೆ</u>**

ಆರೋಪಿಯಾದ ನೀವು ನಿಮ್ಮ ಅವಶ್ಯಕತೆಗಾಗಿ ಪಿರ್ಯಾಧಿದಾರರ ಸಹಕಾರ ಸಂಘದಿಂದ ಪಡೆದ ಸಾಲವನ್ನು ತೀರುವಳಿ ಮಾಡುವ ಸಲುವಾಗಿ ನೀವು ನಿಮ್ಮ ಬಾಬ್ತು ರೂ.2,07,150/- ಗಳ ಬಾಬ್ತು 254977 ರ ಸಂಖ್ಯೆಯುಳ್ಳ 15.09.2022 ದಿನಾಂಕವನ್ನು ನಮೂದಿಸಿದ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಬೆಳವಿನಕೊಡಿಗೆ ಶಾಖೆಯ ಒಂದು ಚೆಕ್ಕುನ್ನು ಅವರಿಗೆ ನೀಡಿದ್ದು, ಸದರಿ ಚೆಕ್ಕುನ್ನು ಪಿರ್ಯಾಧಿದಾರರು ಸದರಿ ಶಾಖೆಗೆ ಹಾಜರುಪಸಿದಾಗ "Funds insufficient'' ಎಂಬ ಹಿಂಬರಹದೊಂದಿಗೆ ನೀವು ಕೊಟ್ಟಂತ ಚೆಕ್ ವಾಪಸ್ಸಾಗಿದ್ದು ಸದರಿ ಚೆಕ್ ಅಮಾನ್ಯಗೊಂಡ ಬಗ್ಗೆ ನಿಮ್ಮ ಗಮನಕ್ಕೆ ದಿನಾಂಕ 20.09.2022 ರಂತೆ ವಕೀಲರ ನೋಟೀಸು ನೀಡಿದ್ದು ಸದರಿ ನೋಟೀಸು ನಿಮಗೆ ದಿನಾಂಕ 28.09.2022 ರಂದು ಜಾರಿಯಾಗದೇ ವಾಪಸ್ಸಾಗಿರುತ್ತದೆ. ನೀವು ಸದರಿ ಚೆಕ್ ಬಾಬ್ತು ಹಣವನ್ನು ನೀಡದೇ ವರ್ಗಾವಣೀಯ ಲಿಖಿತ ಅಧಿನಿಯಮ ಕಲಂ 138 ರ ಅಡಿಯಲ್ಲಿ ಅಪರಾಧವನ್ನು ನನ್ನ ಸಂಜ್ಞೆಯಲ್ಲಿ ಎಸಗಿರುತ್ತೀರಿ.

ಪ್ರಶ್ನೆ 1ಃ- ನಿಮಗೆ ಓದಿ ಹೇಳಿದ ಆರೋಪಣೆ ಅರ್ಥವಾಯಿತೇ?

ಉತ್ತರಃ ತಿಳಿಯಿತು.

ಪ್ರಶ್ನೆ 2ಃ- ಮೇಲಿನ ಆಪಾಧನೆಯನ್ನು ಒಪ್ಪಿಕೊಳ್ಳುತ್ತೀರೋ ಅಥವಾ ವಿಚಾರಣೆಯಾಗಬೇಕೆ?

ಉತ್ತರಃ ವಿಚಾರಣೆಯಾಗಬೇಕು.

ಮೇಲಿನ ಆರೋಪಣೆಯನ್ನು ಆರೋಪಿಗೆ ಓದಿ ಹೇಳಿದ ನಂತರ ಅವರು ನೀಡಿದ ಉತ್ತರವನ್ನು ಸ್ವತಃ ನಾನೇ ಬರೆದುಕೊಂಡಿರುವುದು ನಿಜವೆಂದು ದೃಡೀಕರಿಸುತ್ತೇನೆ.

ಸಹಿ/- 04.07.2025.
(ನಂದಿನಿ ಎಂ.ಎನ್.)
ಸಿವಿಲ್ ನ್ಯಾಯಾಧೀಶರು ಮತ್ತು
ಪ್ರದನ್ಯಾದಂಃ ಕೊಪ್ಪ.